**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂ. 409/2017

ಸಿಡಬ್ಲೂ-5 ಪಿಡಬ್ಲೂ-1

| | | |
|---|---|---|
| ಹೆಸರು | : | ಶ್ರೀ ಶಬ್ಬಿರಮಿಯಾ |
| ತಂದೆಯ ಹೆಸರು | : | ಅಮೀರಪಟೇಲ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತರು |
| ವಾಸ ಸ್ಥಳ | : | ಶಹಾಬಾದ |

ದಿನಾಂಕ 21.04.2022

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ.</u>**

ಚಿತ್ತಾಪುರ ಉಪವಿಭಾಗದಲ್ಲಿ ನವೆಂಬರ 2012 ರಿಂದ ಜುಲೈ 2017 ರವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 22.01.2014 ರಂದು ನಾನು ಕಚೇರಿಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಸೇಡಂ ರೈಲು ನಿಲ್ದಾಣದ ಎದುರುಗಡೆ ಬಯಲು ಜಾಗದಲ್ಲಿ ಆರೋಪಿ ಅಕ್ರಮವಾಗಿ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದಾನೆ ಅಂತಾ ಖಚಿತ ಮಾಹಿತಿ ಬಂದಿರುತ್ತದೆ. ಆಗ ನಾನು ನಮ್ಮ ಸಿಬ್ಬಂದಿ ಜನರಾದ ಜಿ.ಎಸ್.ಪಾಟೀಲ, ನಾಗಪ್ಪ, ಮಡಿವಾಳಪ್ಪ, ಮಹಾದೇವಪ್ಪ ಹಾಗೂ ಮಕ್ಸೂದ ಸಲೀಂ ಇವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ಬಂದಿದ್ದು ಆಗ ಸಮಯ 07.00 ಗಂಟೆ ಆಗಿತ್ತು. ರೈಲ ನಿಲ್ದಾಣಕ್ಕೆ 07.15 ಕ್ಕೆ ಬಂದು ಎದುರುಗಡೆ ಇರುವ ಬಯಲು ಜಾಗೆಯಲ್ಲಿ ನಮ್ಮನ್ನು ನೋಡಿ ಜನರು ಓಡಿಹೋಗುವುದನ್ನು ಗಮನಿಸಿ ಆ ಸ್ಥಳಕ್ಕೆ ಹೋದಾಗ ಅಲ್ಲಿ ಒಬ್ಬ ಮನುಷ್ಯ ಪ್ಲಾಸ್ಟಿಕ ಗೊಬ್ಬರ ಚೀಲದಲ್ಲಿ ಕಲಬೆರಕೆ ಸೇಂದಿ ಮಾರಾಟ ಮಾಡಲು ಇಟ್ಟುಕೊಂಡು ಕುಳಿತ್ತಿದ್ದನು ಆಗ ನಾನು ಚೀಲದಲ್ಲಿ ಏನು ಇದೇ ಎಂದು ವಿಚಾರಿಸಿದಾಗ ಅವನು ಸೇಂದಿ ಇರುವುದಾಗಿ ಹೇಳಿರುತ್ತಾನೆ. ನಾನು ಅವನಲ್ಲಿ ಸೇಂದಿ ಮಾರಾಟ ಮಾಡುವ ಕುರಿತು ಕಾಗದ ಪತ್ರ ತೋರಿಸುವಂತೆ ಕೇಳಿದ್ದು ಆಗ ಆತ ಇಲ್ಲ ಎಂದು ಹೇಳಿರುತ್ತಾನೆ. ನಂತರ ಅವನ ಹೆಸರು ಕೇಳಲು ಆತ ಸಂಬಣ್ಣ ತಂದೆ ಶರಣಪ್ಪ ಎಂದು ಹೇಳಿರುತ್ತಾನೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ಆಗ ನಮಗೆ ಅಬಕಾರಿ ದಾಳಿಯಲ್ಲಿ ಸಿಕ್ಕಿರುತ್ತಾನೆ. ನಂತರ ಆರೋಪಿತನನ್ನು ಮತ್ತು ಮು.ಮಾ.ಗಳನ್ನು ನನ್ನ ವಶಕ್ಕೆ ತೆಗೆದುಕೊಂಡು ಒಟ್ಟು 25 ಲೀ. ಸೇಂದಿಯಲ್ಲಿಂದ್ದ ಎರಡು ಬಾಟಲಿಗಳಲ್ಲಿ ತಲಾ 180 ಎಮ್.ಎಲ್.ರಂತೆ ಸೇಂದಿ ತುಂಬಿಸಿಕೊಂಡು

ಅವುಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ಶಿಲ್ ಮಾಡಿ ಇಲಾಖೆ ಮುದ್ರೆ 420 ರಿಂದ ಶಿಲ್ ಮಾಡಿರುತ್ತೇನೆ. ಸಿಕ್ಕ ಜಾಗದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಬರೆದಿರುತ್ತೇನೆ. ಸಾಕ್ಷಿ ಪಂಚನಾಮೆಯ ಮೇಲಿರುವ ಸಹಿಯನ್ನು ಗುರುತಿಸುತ್ತಾರೆ. ಪಂಚನಾಮೆಯನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸದರಿ ಜಪ್ತುಪಡಿಸಿಕೊಂಡ ಎರಡು ಬಾಟಲಿಗಳ ಮೇಲೆ ನನ್ನ ಮತ್ತು ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿ ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡಿರುತ್ತೇನೆ. ಪಂಚನಾಮೆಯನ್ನು ಸಾಯಂಕಾಲ 07.30 ರಿಂದ 08.30 ರವರೆಗೆ ಲೈಟ ಬೆಳಕಿನಲ್ಲಿ ಬರೆದು ಮುಗಿಸಿರುತ್ತೇನೆ. ನಂತರ ಸಿಕ್ಕ ಸೇಂದಿ ಮತ್ತು ಆರೋಪಿಯನ್ನು ಕಚೇರಿಗೆ ತೆಗೆದುಕೊಂಡು ಬಂದು ಸರಕಾರದ ತರ್ಫೆ ದೂರು ನೀಡಿರುತ್ತೇನೆ. ದೂರನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ದಸ್ತಗಿರಿ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಆ ದಿವಸ ಘಟನಾ ಸ್ಥಳದಲ್ಲಿ ತಯಾರಿಸಿದ ಮಾದರಿ ಮುದ್ರೆ ನಮೂನೆ ಪಂಚರ ಸಮಕ್ಷಮ ತಯಾರಿಸಿದ್ದು ಅದನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಮತ್ತು ಮು.ಮಾ.ಗಳನ್ನು ಗುರುತಿಸುತ್ತೆನೆ.

**(ಮು.ಮಾ.ಗಳು ಗುರುತಿಗಾಗಿ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರ.ದ.ನ್ಯಾದಂ.ಸೇಡಂ.

*SYH*